**ಸಾಕ್ಷಿಯನ್ನು ದಿಃ 14.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಯಜಮಾನರ ಹೆಸರು ಅಂಕಪ್ಪ. ನಾನು ವಾಜಮಂಗಲ ಗ್ರಾಮದಲ್ಲಿ ವಾಸವಿದ್ದೇನೆ. ಮಧುಕುಮಾರ್ ನನ್ನ ಅಣ್ಣ, ಅವರು ರಾಮನಗರದಲ್ಲಿ ವಾಸ ಇದ್ದಾರೆ. 1 ನೇ ಪ್ರತಿವಾದಿ ರಾಮಲಿಂಗಯ್ಯ ನನ್ನ ತಂದೆ. ಅಪಘಾತದಲ್ಲಿ ಒಳಗೊಂಡ ಹೋಂಡಾ ಆಕ್ಟೀವ ವಾಹನ ನನ್ನ ಮೃತ ತಾಯಿಯ ಹೆಸರಿನಲ್ಲಿದೆ. ವಿಮಾ ಪಾಲಿಸಿ ಸಹ ನನ್ನ ತಾಯಿಯ ಹೆಸರಿನಲ್ಲಿದೆ. ಅರ್ಜಿ ಹಾಕುವಾಗ ಪರಿಹಾರಕ್ಕಾಗಿ ವಿಮಾ ಪಾಲಿಸಿಯ ಅಡಿಯಲ್ಲಿ ಪರಿಹಾರ ಪಡೆಯಬಹುದೇ ಇಲ್ಲವೇ ಎಂದು ತಿಳಿದುಕೊಂಡಿಲ್ಲ. ನನ್ನ ತಾಯಿಯೇ ವಿಮೆ ತೆಗೆದುಕೊಂಡವರಾಗಿರುವ ಕಾರಣ ಅವರು 3 ನೇ ಪಕ್ಷಗಾರರಲ್ಲ ಎಂದರೆ ಸರಿ. ವಿಮಾ ಪಾಲಿಸಿಯ ಅವಧಿ ದಿಃ 03.01.2019 ರಿಂದ ದಿಃ 02.01.2020 ರವರೆಗೆ ಮಾತ್ರ ಇತ್ತು ಎಂದರೆ ಸರಿಯಲ್ಲ. ದಿಃ 03.01.2019 ರಿಂದ ದಿಃ 02.01.2024 ರವರೆಗೆ 3 ನೇ ಪಕ್ಷಗಾರರಿಗೆ ಪಾಲಿಸಿ ಇತ್ತು ಎಂದರೆ ಸರಿಯಲ್ಲ. ಅಪಘಾತ ದಿಃ 31.07.2020 ರಲ್ಲಿ ಆಗಿರುವ ಕಾರಣ ವಿಮಾ ಪಾಲಿಸಿ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯೇ ಮಾಲೀಕರು ಆಗಿರುವ ಕಾರಣ ವಿಮಾ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

2. ನನ್ನ ತಾಯಿಗೆ ಯಾವ ಬ್ಯಾಂಕ್ ನಲ್ಲಿ ಖಾತೆ ಇತ್ತು ಎಂದು ನನಗೆ ಗೊತ್ತಿಲ್ಲ. ಬಿಸ್ಕೆಟ್ ಕಂಪನಿಯವರು ನಮ್ಮ ತಾಯಿಯ ಯಾಬ ಬ್ಯಾಂಕ್ ಖಾತೆಗೆ ಸಂಬಳ ಜಮಾ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ. 10 ದಾಖಲೆಯನ್ನು ಈ ಪ್ರಕರಣಕೊಸ್ಕರ ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಂದೆಯ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅತಿವೇಗವಾಗಿ ಚಲಾಯಿಸಿ ಹಂಸ್ ಬಳಿ ಇದ್ದಕ್ಕಿದ್ದ ಹಾಗೆ ಬ್ರೇಕ್ ಹಾಕಿದ

ಕಾರಣ ಅಪಘಾತ ಆಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 4 ನಕ್ಷೆಯಲ್ಲಿ ನಾನು ಹೇಳುವಂತ ಹಂಪ್ ಇಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ನನ್ನನ್ನು ಪೋಲೀಸರು ವಿಚಾರಣೆ ಮಾಡಿರುವುದಿಲ್ಲ. ಅಪಘಾತ ನೋಡಿದವರು ನನಗೆ ಪರಿಚಿತರಲ್ಲ. ಅಪಘಾತ ಸ್ಥಳಕ್ಕೂ ನಮ್ಮ ಊರಿಗೂ 70 ಕಿ.ಮೀ ದೂರ ಇದೆ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 3 ನೇ ಎದುರುದಾರರ ಪರ ವಕೀಲರಿಂದಃ**

ಸಮಯಾವಕಾಶ ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.